# ಕರ್ನಾಟಕ ಲೋಕಾಯುಕ್ತ

ಸಂಖ್ಯೆ: ಕಂಪ್ಲೆಂಟ್\ಉಪಲೋಕ್\ಎಂವೈಎಸ್\761\2013\ಉನಿವಿ-4 ಬಹುಮಹಡಿಗಳ ಕಟ್ಟಡ,
ಡಾ||ಬಿ.ಆರ್.ಅಂಭೇಡ್ಕರ್ ವೀಧಿ,
ಬೆಂಗಳೂರು, ದಿನಾಂಕ: 23/02/2018
26

## ಕರ್ನಾಟಕ ಲೋಕಾಯುಕ್ತ ಕಾಯಿದೆ 1984ರ ಕಲಂ 12(1)ರ ಅನ್ವಯ ವರದಿ

**ವಿಷಯ:** ದೂರುದಾರರಾದ ಶ್ರೀ.ಬಿ.ಎ.ಕಲ್ಲೇಶ್ ಬಿನ್ ಲೇ.ಅಪ್ಪಾಜಿಗೌಡ, #20, ಹೌಸಿಂಗ್ ಬೋರ್ಡ್ ಕಾಲೋನಿ, ನಂಜನಗೂಡು ತಾಲ್ಲೂಕ್, ಮೈಸೂರು ಜಿಲ್ಲೆ ರವರ ದೂರನ್ನು ಪರಿಹರಿಸುವ ಬಗ್ಗೆ.

**********

ಮೈಸೂರು ಜಿಲ್ಲೆ ನಂಜನಗೂಡು ತಾಲ್ಲೂಕ್ ಹೌಸಿಂಗ್ ಭೋರ್ಡ್ ಕಾಲೋನಿ ನಂ.20ರ ನಿವಾಸಿಯಾದ ಶ್ರೀ.ಬಿ.ಎ.ಕಲ್ಲೇಶ್ ಬಿನ್ ಲೇ.ಅಪ್ಪಾಜಿಗೌಡ (ಇನ್ನು ಮುಂದೆ "ದೂರುದಾರರು" ಎಂದು ಕರೆಯಲ್ಪಡುತ್ತಾರೆ) ತಮ್ಮ ದೂರಿನಲ್ಲಿ ಮೈಸೂರು ಜಿಲ್ಲೆ ನಂಜನಗೂಡು ತಾಲ್ಲೂಕ್ ಉಪ ನೋಂದಣಾಧಿಕಾರಿಗಳ ಕಛೇರಿಯ ಹಿಂದಿನ ಉಪ ನೋಂದಣಾಧಿಕಾರಿಗಳಾಗಿದ್ದ 1) ಶ್ರೀ.ಬಸವಣ್ಣ ಮತ್ತು 2) ಶ್ರೀ.ಚೆಲುವರಾಜು ಹಾಗೂ 3) ದೇಬೂರು ಗ್ರಾಮ ಪಂಚಾಯತ್‌ನ ಕಾರ್ಯದರ್ಶಿಯಾಗಿದ್ದ ಶ್ರೀ.ರಾಜಶೇಖರ್ [ಇನ್ನು ಮುಂದೆ "1 ರಿಂದ 3ನೇ ಎದುರುದಾರರು" ಎಂದು ಕ್ರಮವಾಗಿ, ಕರೆಯಲ್ಪಡುತ್ತಾರೆ) ರವರ ವಿರುದ್ಧ ಕರ್ತವ್ಯ ಲೋಪದ ಬಗ್ಗೆ ನೀಡಿದ ದೂರನ್ನು, ಕರ್ನಾಟಕ ಲೋಕಾಯುಕ್ತ ಕಾಯಿದೆಯ ಕಲಂ 9ರ ಅಡಿಯಲ್ಲಿ ತನಿಖೆಗೆ ತೆಗೆದುಕೊಂಡಿದ್ದಿದೆ.

2. **ದೂರಿನ ಸಂಕ್ಷಿಪ್ತ ವಿವರಣೆ:-**

ನಂಜನಗೂಡು ತಾಲ್ಲೂಕ್ ಕಸಬಾ ಹೋಬಳಿ ದೇಬೂರು ಗ್ರಾಮದ ಸರ್ವೆ ನಂ.179/1 ಮತ್ತು 180/1 ಕೃಷಿ ಜಮೀನುಗಳನ್ನು ಕೃಷಿಯೇತರ ಜಮೀನುಗಳನ್ನಾಗಿಸಲು ಅನ್ಯಕ್ರಾಂತ ಆದೇಶವಿಲ್ಲದೇ ಅಕ್ರಮವಾಗಿ ವಸತಿ ಉದ್ದೇಶಕ್ಕಾಗಿ ನಿವೇಶನಗಳಾಗಿ ಪರಿವರ್ತಿಸಿ ಸಾರ್ವಜನಿಕರಿಗೆ ಹಾಗೂ ಸರ್ಕಾರಕ್ಕೆ ವಂಚಿಸಿ ಅಕ್ರಮ ಎಸಗಿರುವುದಾಗಿ ಹೇಳಿದ್ದಾರೆ.

Sd/-

3. ದೂರಿನ ಬಗ್ಗೆ ಎದುರುದಾರರಿಂದ ಆಕ್ಷೇಪಣೆಯನ್ನು ಕೇಳಲಾಗಿ, 1ನೇ ಎದುರುದಾರರು ತಮ್ಮ ಆಕ್ಷೇಪಣೆಯಲ್ಲಿ–

ಕರ್ನಾಟಕ ರಾಜ್ಯ ನೋಂದಣಿ ಕಾಯಿದೆ, 1908 ರೀತ್ಯಾ ಸರ್ಕಾರವು ಹೊರಡಿಸಿದ ಸುತ್ತೋಲೆಯ ಮಾರ್ಗಸೂಚಿ ಪ್ರಕಾರ ಧಸ್ತಾವೇಜುಗಳ ನೋಂದಣಿಗೆ ಸಂಬಂಧಪಟ್ಟ ಅಗತ್ಯ ದಾಖಲೆಗಳನ್ನು ಪಡೆದು ನೋಂದಣಿ ಕಾರ್ಯವನ್ನು ಮಾಡಿದ್ದು, ದೂರಿನಲ್ಲಿ ಮಾಡಿದ ಆಪಾದನೆಗೆ ತಮ್ಮ ಪಾತ್ರವೇನು ಇಲ್ಲ. ತಾವು ದಿ:02/06/06 ರಿಂದ 25/06/09ರವರೆಗೆ ನಂಜನಗೂಡು ಉಪನೋಂದಣಾಧಿಕಾರಿಯಾಗಿ ಕಾರ್ಯನಿರ್ವಹಿಸಿದ್ದು, ದೂರಿನಲ್ಲಿ ಸಲ್ಲಿಸಲಾಗಿರುವ ಡಿಮ್ಯಾಂಡ್ ವಹಿಯ ನಕಲು ಪ್ರತಿಯಲ್ಲಿ ವಿವರಗಳನ್ನು ಪರಿಶೀಲಿಸಿದಾಗ, ತಾವು ಕಾರ್ಯನಿರ್ವಹಿಸಿದ ಅವಧಿಯಲ್ಲಿ ನಿವೇಶನಗಳು ನೋಂದಣಿ ಆಗಿಲ್ಲವೆಂದು ಹೇಳಿದ್ದಾರೆ.

4. ಎರಡನೇ (2ನೇ) ಎದುರುದಾರರು ತಮ್ಮ ಆಕ್ಷೇಪಣೆಯಲ್ಲಿ–

ತಾವು. ದಿನಾಂಕ:25/06/09 ರಿಂದ 26/04/10ರವರೆಗೆ ನಂಜನಗೂಡು ಉಪನೋಂದಣಾಧಿಕಾರಿಯಾಗಿ ಕಾರ್ಯನಿರ್ವಹಿಸಿದ್ದು, ಸದರಿ ಅವಧಿಯಲ್ಲಿ ಧಸ್ತಾವೇಜಿನೊಂದಿಗೆ ನೋಂದಣಿಗಾಗಿ ಹಾಜರುಪಡಿಸಿದ ದಾಖಲಾತಿಗಳನ್ನು ಪರಿಶೀಲಿಸಿ, ನೋಂದಣಿ ಕಾರ್ಯವನ್ನು ಪೂರೈಸಿದೆ. ಅನ್ಯಕ್ರಾಂತ ಮಾಡಿಸಿ, ದಾಖಲೆಗಳನ್ನು ತರಲು ಪಕ್ಷಗಾರರಿಗೆ ನಿರ್ದೇಶನ ನೀಡುವ ಅಧಿಕಾರ ಉಪನೋಂದಣಾಧಿಕಾರಿಗಳಿಗೆ ಇಲ್ಲ. ಯಾವುದೇ ದುರುದ್ದೇಶವಿಲ್ಲದೆ ಸಾರ್ವಜನಿಕ ಹಿತದೃಷ್ಟಿಯಿಂದಲೇ ದಾಖಲಾತಿಗಳ ಆಧಾರದ ಮೇಲೆ ನೋಂದಣಿ ಕಾರ್ಯವನ್ನು ಮಾಡಿದೆ. ದೂರುದಾರರು ಸದರಿ ನೋಂದಣಿಯಿಂದ ಹಾನಿಗೊಳಗಾದ ವ್ಯಕ್ತಿಯಾಗಿಲ್ಲ. ಅವರಿಗೆ ಯಾವುದೇ ರೀತಿಯ ನಷ್ಟ ಆಗಿಲ್ಲವೆಂದು ಹೇಳಿದ್ದಾರೆ.

5. ಮೂರನೇ (3ನೇ) ಎದುರುದಾರರು ತಮ್ಮ ಆಕ್ಷೇಪಣೆಯಲ್ಲಿ–

ತಾವು ದೇಬೂರು ಗ್ರಾಮ ಪಂಚಾಯತ್ ಕಾರ್ಯದರ್ಶಿಯಾಗಿ ದಿ:14/07/05 ರಿಂದ 15/06/07ರವರೆಗೆ ಕೆಲಸ ನಿರ್ವಹಿಸಿದ್ದು, ದೂರಿನಲ್ಲಿ ತಿಳಿಸಿರುವ ನಡವಳಿಗಳು ತಮ್ಮ ಕಾರ್ಯಾವಧಿಗೆ ಸಂಬಂಧಪಟ್ಟಿಲ್ಲ, ಆದಕಾರಣ ತಮ್ಮನ್ನು ದೂರಿನಿಂದ ಕೈಬಿಡಲು ಪ್ರಾರ್ಥಿಸಿದ್ದಾರೆ.

6. ಎದುರುದಾರರುಗಳ ಆಕ್ಷೇಪಣೆಗೆ ದೂರುದಾರರಿಂದ ಪ್ರತ್ಯುತ್ತರವನ್ನು ಕೇಳಲಾಗಿ, ದೂರುದಾರರು ತಮ್ಮ ಪ್ರತ್ಯುತ್ತರದಲ್ಲಿ –

3ನೇ ಎದುರುದಾರರೇ ಇಲಾಖೆಗೆ ಸಂಬಂಧಪಟ್ಟ ದಾಖಲೆಗಳಿಗೆ ಸಹಿ ಮಾಡಿದ್ದಾರೆ, ಈ ಬಗ್ಗೆ ದಿ:05/05/12ರಂದು ತಾವು ಮೈಸೂರು ಜಿಲ್ಲಾ ಪಂಚಾಯತ್‌ಗೆ ದೂರನ್ನು ನೀಡಿದ್ದು, ಅವರು ತನಿಖೆ ನಡೆಸಿ 3ನೇ ಎದುರುದಾರರೇ ಸಹಿ ಮಾಡಿದ್ದಾರೆಂದು ನಂತರ ದಿ:30/06/2007ರಲ್ಲಿ ಬಂದ ಅಧಿಕಾರಿಗಳು ಮುಂದುವರೆಸಿಕೊಂಡು ಹೋಗಿರುವುದಾಗಿ ತಿಳಿದು ಬಂದಿದೆ. 1ನೇ ಎದುರುದಾರರು ನಂಜನಗೂಡು ಉಪನೋಂದಣಾಧಿಕಾರಿಗಳ ಕಛೇರಿಯಲ್ಲಿ ದಿ:10/12/99 ರಿಂದ ಗುಂಟೆ ಲೆಕ್ಕದಲ್ಲಿ ಸರ್ವೆ ನಂ.179/1 ಮತ್ತು 180/1 ಅನ್ನು ನೋಂದಣಿ ಮಾಡಿರುವುದಾಗಿ ಹೇಳಿದ್ದಾರೆ.

7. ಜಿಲ್ಲಾಧಿಕಾರಿಗಳು, ಜಿಲ್ಲಾ ನೋಂದಣಾಧಿಕಾರಿಗಳು ಮತ್ತು ಕಾರ್ಯನಿರ್ವಾಹಕ ಅಧಿಕಾರಿಗಳು, ತಾಲ್ಲೂಕ್ ಪಂಚಾಯತ್, ನಂಜನಗೂಡು ರವರಿಂದ ವರಧಿಯನ್ನು ಕೇಳಲಾಗಿ, ಅಪರ ಜಿಲ್ಲಾಧಿಕಾರಿಗಳು, ಮೈಸೂರು ರವರು ತಮ್ಮ ವರದಿಯಲ್ಲಿ –

ದೇಬೂರು ಗ್ರಾಮದ ಸರ್ವೆ ನಂ.173/1 ಮತ್ತು 180/1 ಒಟ್ಟು 4.36 ಎಕರೆ ಜಮೀನನ್ನು ಕೃಷಿಯೇತರ ಉದ್ದೇಶಕ್ಕಾಗಿ ಅನ್ಯಕ್ರಾಂತವಿಲ್ಲದೆ ಅಕ್ರಮವಾಗಿ ನಿವೇಶನಗಳನ್ನಾಗಿ ಪರಿವರ್ತಿಸಿರುವ ವಿಚಾರವಾಗಿ ವರದಿ ನೀಡಬೇಕೆಂದು ನಿರ್ದೇಶನ ನೀಡಿರುವಂತೆ ನಿಯಮಬಾಹಿರವಾಗಿ ಖಾತೆ ಮಾಡಲು ನಡವಳಿ ಮಾಡಿರುವ ಅಂದಿನ ಗ್ರಾಮ ಪಂಚಾಯತ್ ಅಧ್ಯಕ್ಷರಾದ ಶ್ರೀ.ಗಂಗಾಧರಾಚಾರಿ ಹಾಗೂ ಸದರಿ ಅವಧಿಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದ ಪಂಚಾಯತ್ ಅಭಿವೃದ್ಧಿ ಅಧಿಕಾರಿಯಾದ ಶ್ರೀ.ಬಿ.ಎನ್.ಸಣ್ಣೇಗೌಡ ಮತ್ತು ಅಂದಿನ ಬಿಲ್ ಕಲೆಕ್ಟರ್ ಶ್ರೀ.ಆರ್.ಪುಟ್ಟವೀರಯ್ಯ ರವರು ಅಕ್ರಮ ಖಾತೆ ಮಾಡಿರುವುದು ಸಾಬೀತಾಗಿದೆ. ಶ್ರೀ.ಬಿ.ನಾಗರಾಜೇ ಅರಸ್ ಬಿನ್ ಲೇ.ಬಸವರಾಜೇ ಅರಸ್ ಮತ್ತು ಶ್ರೀ.ಎನ್.ಗುರುಪ್ರಸಾದ್ ಬಿನ್ ಎಸ್.ನಾರಾಯಣರಾವ್ ರವರು ಅನ್ಯಕ್ರಾಂತವಾಗದ ಜಮೀನುಗಳಲ್ಲಿ ಬಡಾವಣೆಗಳನ್ನು ನಿರ್ಮಿಸಿ ನಿವೇಶನಗಳನ್ನು ರಚಿಸಿ, ಮಾರಾಟ ಮಾಡಿರುವುದು ಕಂಡು ಬಂದಿದೆಯೆಂದು ಹೇಳಿ, ಸರ್ಕಾರದ ನಿಯಮಗಳನ್ನು ಉಲ್ಲಂಘಿಸಿರುವ ನೌಕರರುಗಳ ವಿರುದ್ಧ ಶಿಸ್ತು ಕ್ರಮ ಕೈಗೊಳ್ಳಲು ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತ್, ಮೈಸೂರು ರವರಿಗೆ ಪತ್ರ ಬರೆಯಲಾಗಿದೆಯೆಂದು ಹೇಳಿದ್ದಾರೆ.

8. ಅಪರ ಜಿಲ್ಲಾಧಿಕಾರಿಗಳ ವರದಿಯ ಆಧಾರದ ಮೇಲೆ ಅಂದಿನ ಗ್ರಾಮ ಪಂಚಾಯತ್ ಅಧ್ಯಕ್ಷರಾದ ಶ್ರೀ.ಗಂಗಾಧರಾಚಾರಿ ಹಾಗೂ ಸದರಿ ಅವಧಿಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದ ಪಂಚಾಯತ್ ಅಭಿವೃದ್ಧಿ ಅಧಿಕಾರಿಯಾದ ಶ್ರೀ.ಬಿ.ಎನ್.ಸಣ್ಣೇಗೌಡ ಮತ್ತು ಅಂದಿನ ಬಿಲ್ ಕಲೆಕ್ಟರ್ ಶ್ರೀ.ಆರ್.ಪುಟ್ಟವೀರಯ್ಯ ರವರುಗಳನ್ನು

Sd/-

ಕ್ರಮವಾಗಿ, 4 ರಿಂದ 6ನೇ ಎದುರುದಾರರನ್ನಾಗಿ ಮುಖಪುಟದಲ್ಲಿ ಸೇರಿಸಿ, ಸದರಿಯವರುಗಳಿಂದ ಆಕ್ಷೇಪಣೆಯನ್ನು ಕೇಳಲಾಗಿ, 4ನೇ ಎದುರುದಾರರು ಮೃತಪಟ್ಟಿದ್ದಾರೆಂದು ವರದಿಸಿದೆ.

9. ಐದನೇ (5ನೇ) ಎದುರುದಾರರು ತಮ್ಮ ಆಕ್ಷೇಪಣೆಯಲ್ಲಿ–

ದೇಬೂರು ಗ್ರಾಮದ ಸರ್ವೆ ನಂ.179/1 ಮತ್ತು 180/1ರಲ್ಲಿ ವ್ಯವಸಾಯದ ಜಮೀನನ್ನು ವಾಸದ ನಿವೇಶನವನ್ನಾಗಿ ತಮ್ಮ ಸೇವಾವಧಿಯಲ್ಲಿ ರಚಿಸಿಲ್ಲ. ವಸತಿ ಉದ್ದೇಶಕ್ಕಾಗಿ ನಿವೇಶನವನ್ನು ರಚಿಸಿರುವುದು ತಮ್ಮ ಹಿಂದಿನ ಸಹೋದ್ಯೋಗಿಯ ಸೇವಾವಧಿಯಲ್ಲಿ ಆಗಿದೆ. ತಮ್ಮ ಸಹೋದ್ಯೋಗಿ ಡಿಮ್ಯಾಂಡ್ ವಹಿಯಲ್ಲಿ ದಾಖಲಿಸಿರುವ ವಿವರಗಳನ್ನು ಅವಲಂಭಿಸಿ ಮುಂದಿನ ಕ್ರಮ ಕೈಗೊಂಡಿರುವುದಾಗಿ ಹೇಳಿದ್ದಾರೆ.

10. ಆರನೇ (6ನೇ) ಎದುರುದಾರರು ತಮ್ಮ ಆಕ್ಷೇಪಣೆಯಲ್ಲಿ–

ತಾವು ಪಂಚಾಯತ್‌ನ ಖಾಯಂ ನೌಕರರಾಗದಿರುವುದರಿಂದ, ವ್ಯವಸಾಯದ ಜಮೀನನ್ನು ಅನ್ಯಕ್ರಾಂತ ಮಾಡುವುದಾಗಲೀ, ನಿವೇಶನವನ್ನು ವಸತಿಯ ಉದ್ದೇಶಕ್ಕಾಗಿ ಪರಿವರ್ತಿಸುವ ಅಧಿಕಾರವಾಗಲೀ ತಮಗೆ ಇಲ್ಲ. ಬಿಲ್ ಕಲೆಕ್ಟರಾದ ತಾವು ಸರ್ಕಾರಿ ನೌಕರರಾಗಿಲ್ಲ. ಆದ್ದರಿಂದ, ದೂರಿನಲ್ಲಿ ನಮೂದಿಸಿರುವ ಅಂಶಕ್ಕೂ ತಮಗೂ ಯಾವುದೇ ಸಂಬಂಧವಿಲ್ಲವೆಂದು ಹೇಳಿದ್ದಾರೆ.

11. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯತ್, ಮೈಸೂರು ರವರು ತಮ್ಮ ವರದಿಯಲ್ಲಿ, ಪ್ರಕರಣದಲ್ಲಿ ಭಾಗಿಯಾಗಿರುವ 5 ಮತ್ತು 6ನೇ ಎದುರುದಾರರುಗಳ ವಿರುದ್ಧದ ಆರೋಪಗಳಿಗೆ ಸಂಬಂಧಿಸಿದಂತೆ, ತಾಲ್ಲೂಕ್ ಪಂಚಾಯತ್ ಕಾರ್ಯನಿರ್ವಾಹಕ ಅಧಿಕಾರಿಗಳು ಕರಡು ದೋಷಾರೋಪಣ ಪಟ್ಟಿಯನ್ನು ಸಲ್ಲಿಸಿದ್ದು; ಸದರಿ ನೌಕರರುಗಳಿಗೆ ಜಾರಿಯಾಗಿದೆ. ನೌಕರರು ಸಮಜಾಯಿಷಿ ಸಲ್ಲಿಸಿದ ನಂತರ ವಿಚಾರಣಾಧಿಕಾರಿಗಳನ್ನು ನೇಮಕ ಮಾಡಲು ಕ್ರಮವಹಿಸಿ, ವಿಚಾರಣಾ ವರದಿಯನ್ನು ಪಡೆದು ದಂಡನಾದೇಶವನ್ನು ಹೊರಡಿಸಲು ಕ್ರಮ ವಹಿಸಲಾಗುವುದಾಗಿ ಹೇಳಿದ್ದಾರೆ.

12. ಒಂದರಿಂದ 3, 5 ಮತ್ತು 6ನೇ ಎದುರುದಾರರ ಆಕ್ಷೇಪಣೆಗಳಿಗೆ ದೂರುದಾರರಿಂದ ಪ್ರತ್ಯುತ್ತರವನ್ನು ಕೇಳಲಾಗಿ, ಸದರಿಯವರು ತಮ್ಮ ಪ್ರತ್ಯುತ್ತರದಲ್ಲಿ ಆಕ್ಷೇಪಣೆಯ ಅಂಶಗಳು ಸುಳ್ಳಿನಿಂದ ಕೂಡಿವೆಯೆಂದು ಹೇಳಿದ್ದಾರೆ.

13. ಕಡತ ಮತ್ತು ದಾಖಲೆಗಳನ್ನು ಕೂಲಂಕಷವಾಗಿ ಪರಿಶೀಲಿಸಲಾಗಿ, ಕಂಡು ಬರುವ ಅಂಶಗಳೇನೆಂದರೆ:-

ದೇಬೂರು ಗ್ರಾಮದ ಸರ್ವೆ ನಂ.179/1 ಮತ್ತು 180/1ಕ್ಕೆ ಸಂಬಂಧಪಟ್ಟಂತೆ ದಿ:12/07/10ರಂದು ದೇಬೂರು ಗ್ರಾಮ ಪಂಚಾಯತ್‌ನಲ್ಲಿ ನಡೆದ ಗ್ರಾಮ ಪಂಚಾಯತ್ ಸಾಮಾನ್ಯ ಸಭಾ ನಡವಳಿಯ ರೀತ್ಯಾ ಅಕ್ರಮ ಖಾತೆಯನ್ನು ಮಾಡಲು ಅಂಗೀಕರಿಸಿದೆ. 1 ಮತ್ತು 2ನೇ ಎದುರುದಾರರು ಉಪನೋಂದಣಾಧಿಕಾರಿಗಳಾಗಿದ್ದಾರೆ. 3ನೇ ಎದುರುದಾರರು ಸದರಿ ಗ್ರಾಮ ಪಂಚಾಯತ್ ಕಾರ್ಯದರ್ಶಿಯಾಗಿ ದಿ:14/07/05 ರಿಂದ 15/06/07ರವರೆಗೆ ಕಾರ್ಯನಿರ್ವಹಿಸಿದ್ದಾರೆ. ಖಾತೆ ಅಂಗೀಕರಿಸಿದ ಅವಧಿಯಲ್ಲಿ 4ನೇ ಎದುರುದಾರರು ಸದರಿ ಪಂಚಾಯತ್‌ನ ಅಧ್ಯಕ್ಷರಾಗಿದ್ದು, ಅವರು ಮೃತಪಟ್ಟಿದ್ದಾರೆ. 6ನೇ ಎದುರುದಾರರು ಬಿಲ್ ಕಲೆಕ್ಟರಾಗಿ ಕಾರ್ಯನಿರ್ವಹಿಸುತ್ತಿದ್ದು, ಸದರಿ ಕಾನೂನುಬಾಹಿರ ಖಾತೆ ಅಂಗೀಕರಿಸುವಲ್ಲಿ ಅವರ ಪಾತ್ರವೇನು ಇಲ್ಲದಿರುವುದು ಕಂಡು ಬಂದಿದೆ. 1 ಮತ್ತು 2ನೇ ಎದುರುದಾರರು ಉಪನೋಂದಣಾಧಿಕಾರಿಗಳಾಗಿ ಕಾರ್ಯನಿರ್ವಹಿಸಿದ್ದರಿಂದ, ನೋಂದಣಿಗೆ ಹಾಜರುಪಡಿಸಿದ ದಾಖಲಾತಿಗಳಲ್ಲಿ ನಮೂದು ಮಾಡಿದ ಸ್ವತ್ತುಗಳಿಗೆ ಸಂಬಂಧಪಟ್ಟಂತೆ ನೋಂದಣಿ ಕಾಯಿದೆ ರೀತ್ಯಾ ಧಸ್ತಾವೇಜುಗಳ ನೋಂದಣಿಗೆ ಸಂಬಂಧಿಸಿದಂತೆ ಮಾತ್ರ ಮಧ್ಯ ಪ್ರವೇಶಿಸುವುದರ ಹೊರತಾಗಿ ಬೇರೆ ವಿಚಾರಣೆಯನ್ನು ನಡೆಸುವಂತಿಲ್ಲ. ಅಕ್ರಮ ಖಾತೆ ಅಂಗೀಕರಿಸಿದ ಅವಧಿಯಲ್ಲಿ 5ನೇ ಎದುರುದಾರರು ಪಂಚಾಯತ್ ಅಭಿವೃದ್ಧಿ ಅಧಿಕಾರಿಯಾಗಿ ಕಾರ್ಯನಿರ್ವಹಿಸುತ್ತಿದ್ದು, ಹಾಲಿ ಸದರಿಯವರು ನಿವೃತ್ತರಾಗಿದ್ದಾರೆ. ಅವರ ವಿರುದ್ಧ ಈಗಾಗಲೇ ಇಲಾಖಾ ವಿಚಾರಣೆ ನಡೆದು, ಆರೋಪ ಸಾಬೀತಾಗಿದೆ. ಅವರು ವಯೋ ನಿವೃತ್ತಿ ಹೊಂದಿರುವುದರಿಂದ, ಕರ್ನಾಟಕ ನಾಗರೀಕ ಸೇವಾ ನಿಯಮಾವಳಿಗಳ ನಿಯಮ 214ರಂತೆ ದಂಡನೆ ವಿಧಿಸಿದೆ.

14. ಆದ್ದರಿಂದ, ದೇಬೂರು ಗ್ರಾಮದ ಸರ್ವೆ ನಂ.179/1 ಮತ್ತು 180/1ರ 4.36 ಎಕರೆ ಕೃಷಿಯೇತರ ಜಮೀನು ಅನ್ಯಕ್ರಾಂತವಾಗದೇ ವ್ಯವಸಾಯೇತರ ಉದ್ದೇಶಕ್ಕಾಗಿ (ನಿವೇಶನಗಳನ್ನಾಗಿ) ಬಳಸಲಾಗಿರುವುದು ಕಂಡು ಬಂದಿದೆ. ದಿ:12/07/10ರ ದೇಬೂರು ಗ್ರಾಮ ಪಂಚಾಯತ್‌ನ ಸಭಾ ನಡವಳಿಯ ನಿರ್ಣಯದಂತೆ ಸದರಿ ಸ್ವತ್ತುಗಳಲ್ಲಿ ಮಾಡಿರುವ ನಿವೇಶನಗಳಿಗೆ ಅಕ್ರಮ ಖಾತೆ ಮಾಡಿರುವುದರಿಂದ, ಸದರಿ ಆದೇಶವನ್ನು ಮತ್ತು ಖಾತೆಯನ್ನು ರದ್ದುಪಡಿಸುವ ಬಗ್ಗೆ ಸೂಕ್ತ ಕ್ರಮ ಕೈಗೊಳ್ಳುವಂತೆ ಕರ್ನಾಟಕ ಲೋಕಾಯುಕ್ತ ಕಾಯಿದೆ ಕಲಂ 12(1)ರ ಅಡಿ ಪ್ರದತ್ತವಾದ ಅಧಿಕಾರದಡಿ, ಈಗ, ಈ ವರದಿ ಮೂಲಕ, ಸಕ್ಷಮ ಪ್ರಾಧಿಕಾರಕ್ಕೆ ಶಿಫಾರಸ್ಸು ಮಾಡಲಾಗುತ್ತಿದೆ.

SZM

15. ಹಾಗೆಯೇ, ಕರ್ನಾಟಕ ಲೋಕಾಯುಕ್ತ ಕಾಯಿದೆ 1984 ಕಲಂ 12(2)ರ ಪ್ರಕಾರ ಸಕ್ಷಮ ಪ್ರಾಧಿಕಾರವು, ಈ ವರದಿಯ ಮೇಲೆ ಏನು ಕ್ರಮ ಕೈಗೊಂಡಿದೆ ಅಥವಾ ಏನು ಕ್ರಮ ಕೈಗೊಳ್ಳಲಾಗುತ್ತದೆ ಎಂಬುದರ ಬಗ್ಗೆ ಈ ವರದಿಯನ್ನು ಸ್ವೀಕರಿಸಿದ ಒಂದು ತಿಂಗಳೊಳಗೆ ಈ ಪ್ರಾಧಿಕಾರಕ್ಕೆ ತಿಳಿಸಲು ಹೇಳಿದೆ.

2/4/18

(ನ್ಯಾಯಾಮೂರ್ತಿ ಸುಬಾಷ್ ಬಿ ಅಡಿ)
ಉಪಲೋಕಾಯುಕ್ತ-2,
ಕರ್ನಾಟಕ ರಾಜ್ಯ.